**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 306/2019**

ಪಿ ಡಬ್ಲ್ಯೂ-1

**ದಿನಾಂಕ 02-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಮುಂದುವರೆದ ಪಾಟೀ ಸವಾಲು ಶ್ರೀಮತಿ ಕೆ ಪಿ ಪ್ರತಿ ವಾದಿ 6 ರ ಪರ ವಕೀಲರುಃ**

ನಮ್ಮ ತಂದೆ ವ್ಯವಸಾಯವನ್ನು ಬಿಟ್ಟು ಬೇರೆಯಾವ ವ್ಯವಹಾರವನ್ನು ಮಾಡುತ್ತಿರಲಿಲ್ಲ ಎಂದರೆ ಸರಿ. ನಮ್ಮ ಖರೀದಿ ಮಾಡಿರುವ 3 ಎ 20 ಗುಂಟೆ ಜಮೀನು ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. ನಮ್ಮ ತಂದೆಯ ಹಿಸ್ಸೆಗೆ ವಿಭಾಗದ ಮುಖಾಂತರ 3 ಎ 20 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಹಿಸ್ಸೆಗೆ ಬಂದ 3 ½ ಎಕರೆ ಜಮೀನಿನ ಬಂದ ಅದಾಯದಿಂದ 3 ½ ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆಯ ಹಿಸ್ಸೆಗೆ 3 ½ ಎಕರೆ ಜಮೀನು ಖಾತೆ ಆಗಿರುವುದಿಲ್ಲ ಅದರೆ ಮೌಖಿಕವಾಗಿ ನಮ್ಮ ತಂದೆಯ ಹೆಸರಿಗೆ ಬಂದಿರುತ್ತದೆ.

2. ನನಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಮತ್ತು ಒಟ್ಟು ಕುಟುಂಬದ ಆಸ್ತಿಗಳನ್ನು ನಮ್ಮ ತಂದೆಯೇ ನಮ್ಮ 5 ಜನಕ್ಕೂ ಹಿಸ್ಸೆ ಮಾಡಿಕೊಟ್ಟಿರುತ್ತಾರೆ. ಸ ನಂ, 1, 2, 4 ಮತ್ತು 6 ಸ್ವತ್ತುಗಳನ್ನು 6 ನೇ ಪ್ರತಿವಾದಿ ವಿಭಾಗದ ಮುಖಾಂತರ ಬಂದ ಜಮೀನನ್ನು ಚಿಕ್ಕಣ್ಣ ನವರ ಅಳಿಯ ಅಪ್ಪಾಜಿಗೌಡರಿಂದ ಕೊಂಡುಕೊಂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆಗೆ ವಿಭಾಗವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

3. ಸ ನಂ, 1, 2, 4 ಮತ್ತು 6 ನೇ ಸ್ವತ್ತುಗಳು ಯಾವತ್ತು ಸಹ ನನಗೆ ಮತ್ತು ನಮ್ಮ ತಂದೆಗೆ ಖಾತೆಯಾಗಿರುವುದಿಲ್ಲ. ನನಗೆವಿಭಾಗದ ಮುಖಾಂತರ 1 ಎ 23 ಗುಂಟೆ ಜಮೀನು ಈಗಾಗಲೇ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ. 29/4 ರಲ್ಲಿ 13 ಗುಂಟೆ ಪಿತ್ರಾರ್ಜಿತ ಸ್ವತ್ತು ನನ್ನ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಸರ್ವೇ ನಂ. 29/5 ರಲ್ಲಿ 16 ಗುಂಟೆ ಪಿತ್ರಾರ್ಜಿತ ಸ್ವತ್ತು ನನ್ನ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಅದೇ ರೀತಿ ಸರ್ವೇ ನಂ. 23/2 ಎ ರಲ್ಲಿ ನಮ್ಮ ತಂದೆಯ ಮುಖಾಂತರ ನನಗೆ 28 ಗುಂಟೆ ಪಿತ್ರಾರ್ಜಿತ

ಸ್ವತ್ತು ನನ್ನ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಸರ್ವೇ ನಂ. 23/2 ಬಿ ನಲ್ಲಿ 2 ಗುಂಟೆ ಒಟ್ಟು ಕುಟುಂದ ಸ್ವತ್ತು ನನ್ನ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಅದೇ ರೀತಿ ಸರ್ವೇ ನಂ. 40/5 ರಲ್ಲಿ 4 ಗುಂಟೆ ಒಟ್ಟು ಕುಟುಂಬದ ಸ್ವತ್ತು ನನ್ನ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. ಈ ರೀತಿಯಾಗಿ ಒಟ್ಟು ನನಗೆ 1 ಎ 23 ಗುಂಟೆ ನನ್ನ ಹೆಸರಿಗೆ ಖಾತೆ ಯಾಗಿರುತ್ತದೆ ಎಂದರೆ ಸರಿ.

4. ಹಾಗಾಗಿ ನನಗೆ ಮೇಲೆ ಹೇಳಿದ ಎಲ್ಲಾ ಸ್ವತ್ತುಗಳು ಈಗಾಗಲೇ ವಿಭಾಗದ ಮೂಲಕ ಬಂದಿದ್ದರಿಂದ ನನಗೆ ದಾವಾ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಹಾಗಾಗಿ 6 ನೇ ಪ್ರತಿವಾದಿ ಖರೀದಿ ಮಾಡಿರುವ ಜಮೀನಿನ ಮೇಲೆ ನನಗೆ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಪ್ರಸ್ತುತ ಹೆಚ್ಚಿನ ಬೆಲೆ ಬಾಳುವ ಸ್ವತ್ತುಗಳಾದ ಕಾರಣ ನಾನು ಅವುಗಳನ್ನು ಅಕ್ರಮವಾಗಿ ಹೊಂದಲು ಸುಳ್ಳು ದೂರನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ